# ಸ್ಲೇಟ್ ದೂರವಾದಾಗ








ತಾರಿಕ್‌ಗೆ ಅಕ್ವೇರಿಯಮ್‌ಗೆ ಹೋಗುವುದೆಂದರೆ ಬಲು ಇಷ್ಟ. 8 ವರ್ಷದ ಬಾಲಕನಾದರೂ ಅವಗೆ ಮೀನು ಹಾಗೂ ಇತರೆ ಜಲಚರಗಳ ಬಗ್ಗೆ ಹೆಚ್ಚಿನ ಮಾಹಿತಿ ಇತ್ತು. ಅವನಿಗೆ ಅಕ್ವೇರಿಯಮ್ ಅತ್ಯಂತ ಪ್ರಿಯವಾದ ಸ್ಥಳ, ಗಂಟೆಗಟ್ಟಲೇ ಅವನು ದೊಡ್ಡ ಮೀನು, ಚಿಕ್ಕ ಮೀನು, ಬಣ್ಣ ಬಣ್ಣದ ಮೀನು ಹಾಗೂ ಚೆಂದ ಚೆಂದದ ಮೀನುಗಳನ್ನು ನೋಡುತ್ತಾ ಕಾಲ ಕಳೆಯುತ್ತಿದ್ದ.



ಅವರ ಮನೆ ಸಮುದ್ರದ ಹತ್ತಿರದಲ್ಲೇ ಇದ್ದ ಕಾರಣ ಅವನು ಯಾವಾಗಲೂ ಡಾಲ್ಫಿನ್‌ಗಳು ನೀರಿನಿಂದ ಆಚೆ ಬರುವುದನ್ನು (ಜಿಗಿಯುವುದನ್ನು) ನೋಡುತ್ತಾ ಕೂರುತ್ತಿದ್ದ. ಏಡಿಗಳು ಸಮುದ್ರದ ಅಲೆಗಳಿಂದ ತಪ್ಪಿಸಿಕೊಂಡು ಮರಳಿನಲ್ಲಿ ಅಡಗಿ ಕುಳಿತುಕೊಳ್ಳುವುದರ ಜಾಣ್ಮೆ ಮತ್ತು ವೇಗ, ಮತ್ತೆ ಮರಳಿ ಸಮುದ್ರಕ್ಕೆ ಹೋಗುವುದನ್ನು ನೋಡಿ ಚಕಿತನಾಗುತ್ತಿದ್ದ.






ಸಮುದ್ರ ಯಾನಿಗಳು ಹಂಚಿಕೊಳ್ಳುತ್ತಿದ್ದ ಮೀನಿನ/ಸಮುದ್ರದ ಕಥೆಗಳನ್ನು ಟಿ.ವಿ.ಯಲ್ಲಿ ನೋಡುತ್ತಿದ್ದ ಅವನ ಮನೆಯಲ್ಲಿ ಒಂದು ಅಕ್ವೇರಿಯಂ ಇಡಬೇಕೆಂದು ಕನಸು ಕಾಣುತ್ತಿದ್ದ. ಆದರೆ ಮನೆಯ ಈಗಿನ ಕಷ್ಟದ ಪರಿಸ್ಥಿತಿಯಲ್ಲೂ ಮನೆ ರಿಪೇರಿಗೆ ಹಣ ಕೂಡಿಸಲಾಗುತ್ತಿತ್ತು. ಇಂಥ ಸಮಯದಲ್ಲಿ ತಾನು ಅಕ್ವೇರಿಯಂ ಬೇಕೆನ್ನುವುದು ಸರಿ ಅಲ್ಲವೆಂದ ಅವನಿಗೆ ಗೊತ್ತಿತ್ತು. ಅದಕ್ಕೆ ಕೇಳದೆ ಸುಮ್ಮನಾದ.




ಒಂದು ದಿನ ವಿದೇಶದಲ್ಲಿ ವಾಸಿಸುತ್ತಿದ್ದ ಅವನ ಅಬ್ದುಲ್ ಚಿಕ್ಕಪ್ಪ ಬಂದರು ಅವರು ತುಂಬಾ ಗೊಂಬೆ ಹಾಗೂ ಉಡುಗೊರೆಗಳನ್ನು ತಂದಿದ್ದರು. ಅವರು ತಾರಿಕ್ ಜೊತೆ ತುಂಬಾ ಸಮಯ ಕಳೆದರು. ಮೀನಿನ ಹಾಗೂ ಸಮುದ್ರ ಜಗತ್ತಿನ ಬಗ್ಗೆ ಅವನಿಗಿರುವ ಜ್ಞಾನವನ್ನು ನೋಡಿ ಅವರಿಗೆ ತುಂಬಾ ಹೆಮ್ಮೆಯೆನಿಸಿತು. ಅವನ ಚಿಕ್ಕಪ್ಪ ಹೊರಡುವ ಒಂದು ದಿನ ಮೊದಲು ಮತ್ತೆ ತಾರಿಕ್ ಮನೆಗೆ ಬಂದರು. ಅವರ ಕೈಯಲ್ಲಿ ಕಂದು ಬಣ್ಣದ ಪೇಪರ್‌ನಿಂದ ಮುಚ್ಚಿದ್ದ ಒಂದು ದೊಡ್ಡ ವಸ್ತುವಿತ್ತು.



‘ಏನಿದು’ ತಾರಿಕ್ ಕುತೂಹಲದಿಂದ ಕೇಳಿದ ‘ಆಹಾ.. ಇದೊಂದು ನಿನಗೆ ಆಶ್ಚರ್ಯದ ಸಂಗತಿ, ಇದನ್ನು ಬಿಚ್ಚೋಣ, ನಿನಗೆ ಇದು ತುಂಬಾ ಇಷ್ಟವಾಗುತ್ತೇ ಹಾಗೂ ಇದನ್ನು ನೀನು ಪ್ರೀತಿಸುತ್ತೀಯಾ ಎಂದು ನಂಬಿದ್ದೇನೆ’ ಎಂದು ಅವನ ಚಿಕ್ಕಪ್ಪ ಹೇಳಿದರು.






ಅಹ್ಮದ್ ಚಿಕ್ಕಪ್ಪ ಅದನ್ನು ನೆಲದ ಮೇಲಿಟ್ಟು ಕವರ್ ಬಿಚ್ಚಿದರು. ಒಂದು ಕ್ಷಣದ ಮಟ್ಟಿಗೆ ತುಂಬ ಉಸಿರು ಬಿಗಿಹಿಡಿದುಕೊಂಡನು. ಯಾಕೆಂದರೆ ಅವರಲ್ಲಿ ಒಂದು ಗುಂಡಗಿನ ಅಕ್ವೇರಿಯಂ ಮತ್ತು ಅದರಲ್ಲಿ ಎರಡು ಗೋಲ್ಡ್ ಫಿಶ್ ಮೀನುಗಳಿದ್ದವು. ತಾರಿಖ್ ಖುಷಿಗೆ ಪಾರವೇ ಇರಲಿಲ್ಲ. ಅವನು ಖುಷಿಗೆ ಅಳುತ್ತಾ ತನ್ನ ಚಿಕ್ಕಪ್ಪನನ್ನು ತಬ್ಬಿಕೊಂಡು, ಧನ್ಯವಾದ ಹೇಳಿದನು.







ತಾರಿಕ್ ಗೋಲ್ಡ್ ಫಿಶ್‌ಗಳನ್ನು ಹೇಗೆ ನೋಡಿಕೊಳ್ಳುವುದು, ಏನು ಊಟ ಹಾಕಬೇಕು ಹಾಗೂ ಅದರ ಬೌಲ್‌ನ್ನು ಹೇಗೆ ತೊಳೆಯಬೇಕು ಎಂಬುದನ್ನು ಓದಿ ತಿಳಿದುಕೊಂಡನು. ಅವನು ಅಪ್ಪನ ಹತ್ತಿರ ಕೇಳಿ ದುಡ್ಡು ತೆಗೆದುಕೊಂಡು ಮೀನಿಗೆ ಬೇಕಾದ ಊಟ ತರಲು ಮಾರ್ಕೆಟ್‌ಗೆ ಹೋದನು. ಆ ದಿನ ರಾತ್ರಿ ಅವನು ಮೀನಿಗೆ ಊಟ ಹಾಕಿದನು ಮತ್ತು ಮೀನುಗಳು ಅದನ್ನು ತಿನ್ನುವುದನ್ನು ನಕಲು ಮಾಡಿದನು, ಇದನ್ನೆಲ್ಲ ನೋಡುತ್ತಿದ್ದ ಅವನ ಪಾಲಕರು ನಗತೊಡಗಿದರು.



ಪ್ರತಿ ದಿನ ಬೆಳಿಗ್ಗೆ ಎದ್ದೊಡನೆ ಉತ್ಸಾಹದಿಂದ ತನ್ನ ಸ್ನೇಹಿತರನ್ನು ಮೊದಲು ನೋಡಿ, ಅವರಿಗೆ ವಂದನೆ ತಿಳಿಸಿ ನಂತರ ತನ್ನ ಕೆಲಸ ಮಾಡಿಕೊಳ್ಳುತ್ತಿದ್ದನು. ಅವನು ಅವೆರಡರ ಮಧ್ಯೆ ವ್ಯತ್ಯಾಸ ತಿಳಿದುಕೊಂಡನು. ಒಂದು ಸ್ವಲ್ಪ ದೊಡ್ಡದಾಗಿತ್ತು ಹಾಗೂ ಇನ್ನೊಂದರ ಬಾಲದ ಮೇಲೆ ಕಪ್ಪು ಚಿಕ್ಕೆಯಿತ್ತು. ದೊಡ್ಡ ಮೀನಿಗೆ 'ಗೋಲ್ಡೀ' ಎಂದು ಮತ್ತು ಚುಕ್ಕೆಯಿದ್ದ ಮೀನಿಗೆ 'ಸ್ಪಾಟ್ಸ್' ಎಂದು ಹೆಸರಿಟ್ಟನು.



ಪ್ರತಿ ರಾತ್ರಿ ಅವುಗಳಿಗೆ ಊಟ ಹಾಕುವುದು, ಅದಾದ ಮೇಲೆ ಅವು ಈಜುವುದು/ಆಟ ಆಡುವುದನ್ನು ನೋಡಿ ಖುಷಿಪಡುತ್ತಿದ್ದ ಸ್ವಲ್ಪ ಸಮಯದ ನಂತರ ತಾರಿಗೆ ತನ್ನ ಮೀನುಗಳ ಬಟ್ಟಲನ್ನು ಸಿಂಗರಿಸಬೇಕು ಎಂದುಕೊಂಡ, ಹಾಗೇ ಆಟಿಕೆ ಗಿಡಗಳು, ಚಿಕ್ಕ ಬಣ್ಣದ ಕಲ್ಲುಗಳನ್ನು ಉಪಯೋಗಿಸಿ ಗುಹೆ ಹಾಗೂ ಬೇರೆ ತರದ ದಾರಿಗಳನ್ನು ಮಾಡಿದ. ಅವನ ಎರಡೂ ಮೀನುಗಳು ಅಲ್ಲಿ ಆಟ ಆಡುವುದನ್ನು ಇಷ್ಟ ಪಡುತ್ತಿದ್ದವು. ಅಲ್ಲಿ ಈಜುವುದಕ್ಕೆ ಅವುಗಳಿಗೆ ಇಷ್ಟವಾಗುತ್ತಿತ್ತು. ಅವೆರಡು ಈಜುವುದನ್ನು ನೋಡಲು ತಾರಿಕ್‌ಗೆ ಖುಷಿಯಾಗುತ್ತಿತ್ತು.



ಒಂದು ದಿನ ಬೆಳಿಗ್ಗೆ ತಾರಿಗೆ ಮೀನುಗಳಿಗೆ ಊಟ ಹಾಕಲು ಹೋದನು. ಆದರೆ ಅಲ್ಲಿ ಸ್ಪಾಟ್ ತುಂಬಾ ಮಂಕು ಬಡಿದವನಂತೆ ಕೂತಿರುವುದನ್ನು ಗಮನಿಸಿದ. ಅವನು ದಿನಾಲು ಈಜುವಷ್ಟು ವೇಗವಾಗಿ ಈಜುತ್ತಿರಲಿಲ್ಲ ಹಾಗೂ ಹಸಿದವನಂತೆಯೂ ಕಾಣಲಿಲ್ಲ. ಅವನಿಗೆ ದಣಿವಾಗಿರಬೇಕು ಅದಕ್ಕೆ ತಿನ್ನಲೂ ತಯಾರಿಲ್ಲ ಎಂದು ತಾರಿಕ್ ಯೋಚಿಸಿದನು.





ಆದರೆ ತಾರಿಕ್‌ಗೂ ತಾನು ಸಾಕಿರುವ ಮೀನುಗಳು ಬಗ್ಗೆ ಚಿಂತೆ ಶುರುವಾಯಿತು. ಸ್ವಾಟ್ಸ್‌ಗೆ ಏನಾಗಿರಬೇಕು ಎಂದು ಯೋಚಿಸತೊಡಗಿದನು. ಅವನು ಯಾವಾಗಲೂ ಆಟ ಆಡಿಕೊಂಡ ಚೆನ್ನಾಗಿಯೇ ಇದ್ದ, ನೋಡೋಣ ಅವನು ಸರಿ ಹೋಗಬಹುದು ಎಂದ ತಾರಿಕ್ ಅಂದುಕೊಂಡ.





ಮಾರನೇ ದಿನ ತಾರಿಕ್ ತಾಯಿ ಮೀನುಗಳ ಬಗ್ಗೆ ಗೊತ್ತಿರುವ (ಪಶು ವೈದ್ಯರನ್ನು) ಕರೆಸಿದರು. 'ಸ್ವಾಟ್ಸ್‌ಗೆ ಹುಷಾರಿಲ್ಲ ತಮ್ಮ ಕೈಲಾದಷ್ಟು ಪ್ರಯತ್ನ ಮಾಡಿದಿನಿ' ಎಂದು ವೈದ್ಯರು ಹೇಳಿದರು. ಹಾಗೂ ಸ್ವಾಟ್ಸ್‌ಗೆ ಕೊಡಲು ಕೆಲವು ಔಷಧಿಗಳನ್ನು ಕೊಟ್ಟರು. 'ಸ್ವಾಟ್ಸ್ ಹುಷಾರಾಗುತ್ತಾನಾ, ಅವನು ಸರಿಹೋಗಬೇಕು' ಎಂದು ತಾರಿಕ್ ಭಯದಲ್ಲೇ ಹೇಳಿದನು. 'ನೋಡೋಣ ಒಳ್ಳೆಯದನ್ನೇ ಆಶಿಸೋಣ' ಎಂದು ಡಾಕ್ಟರ್ ಹೇಳಿದರು.




ಮಾರನೇ ದಿನ ತಾರಿಕ್ ಸ್ವಾಟ್ಸ್ ಹೇಗಿದ್ದಾನೆ ಎಂದು ನೋಡಲು ಹೋದನು. ನಿದ್ದೆ ಗಣ್ಣಲ್ಲೇ ಗೋಲ್ಡ್ ಈಜುವುದನನು ನೋಡಿ ನಿರಾಳಗೊಂಡ ಅವನಿಗೆ ಅಲ್ಲಿ ಸ್ವಾಟ್ಸ್ ಕಾಣಲಿಲ್ಲ. ಅವನು ಭಯದಲ್ಲಿ ಕಣ್ಣು ಉಜ್ಜಿಕೊಂಡು ನೋಡಿದಾಗ ಸ್ವಾಟ್ಸ್ ನೀರಿನ ಮೇಲೆ ತೇಲುವುದನ್ನು ಕಂಡನು. ಸ್ವಾಟ್ಸ್ ಉಸಿರಾಡುವ ಹಾಗೆ/ಈಜುತ್ತಿರುವ ಹಾಗೆ ಕಾಣಿಸಲಿಲ್ಲ.





ತಕ್ಷಣ ಒಂದು ನೆಟ್ ಮೂಲಕ ತಾರಿಖ್ ಸ್ವಾಟ್ಸ್‌ನ್ನು ಹೊರಗೆ ತೆಗೆದು ಅವನ ಮೈಮೇಲೆ ಉಜ್ಜಿದ, ಬಾಯಿಯ ಹತ್ತಿರ ಉಸಿರು ಬಿಟ್ಟ ಆದರೂ ಸ್ವಾಟ್ಸ್ ಅಲುಗಾಡಲಿಲ್ಲ. ಗಾಬರಿಯಲ್ಲಿ ತಾರಿಕ್ ಅಳಲು ಶುರು ಮಾಡಿದ. ಅವನ ಪಾಲಕರೂ ಬಂದರು. ಅವರೂ ಸ್ವಾಟ್ಸ್‌ನ್ನು ಉಳಿಸುವ ಪ್ರಯತ್ನ ಮಾಡಿದರು ಆದರೆ ಸಾಧ್ಯವಾಗಲಿಲ್ಲ. ಸ್ವಾಟ್ಸ್ ಸತ್ತುಹೋಗಿದ್ದ.



ಏನಾಗಿದೆ ಎಂಬುವುದನ್ನು ಅರ್ಥಮಾಡಿಕೊಳ್ಳುವುದು ಮತ್ತು ನಂಬುವುದು ತಾರಿಕ್‌ಗೆ ಕಷ್ಟವಾಗಿತ್ತು ಅವನ ಸ್ನೇಹಿತ ಸತ್ತುಹೋಗಿದ್ದ –ಯಾಕಾಗಿತ್ತು? ಹೇಗಾಯಿತು? ಈಗ ಗೋಲ್ಡ್ ಭಾವನೆಗಳು ಹೇಗಿರಬಹುದು? ಗೋಲ್ಡ್ ಒಬ್ಬನೇ ಈಜುತ್ತಿದ್ದ ಹಾಗೂ ತನ್ನ ಜೊತೆಗಾರ ಎಲ್ಲಿದ್ದಾನೆ ಎಂದು ಹುಡುಕುತ್ತಿದ್ದ. ತಾರಿಕ್‌ಗೆ ತುಂಬಾ ದುಃಖವಾಗಿ ತುಂಬಾ ಅಳತೊಡಗಿದ. ಅವನು ಮೊದಲಿನ ತರಹ ತುಂಬಾ ಉತ್ಸಾಹದಿಂದ ಇರದಿದ್ದರೂ ಕೂಡ ಗೋಲ್ಡೀಗೆ ಸರಿಯಾದ ಸಮಯಕ್ಕೆ ಊಟ ಹಾಕುತ್ತಿದ್ದ ಹಾಗೂ ಅದನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಆದರೂ ಹೆಚ್ಚಿನ ಸಮಯವನ್ನು ಮೀನಿನ ಟ್ಯಾಂಕ್ ಹತ್ತಿರವೇ ಕಳೆಯುತ್ತಿದ್ದ. ಗೋಲ್ಡೀಗೆ ಏನೂ ಆಗದೇ ಇರಲಿ ಎಂದು ಆಶಿಸುತ್ತಿದ್ದ.






ತಾರಿಕ್ ಗೋಲ್ಡೀಗೆ ಊಟ ಕೊಡುತ್ತಿದ್ದ ಆದರೆ ಸ್ಪಾಟ್ಸ್‌ನ್ನು ಮರೆಯಲು ಆಗಲಿಲ್ಲ. 'ಸ್ಪಾಟ್ಸ್ ಯಾಕೆ ದೂರ ಹೋದ' ಎಂದು ಕಣ್ಣೀರಿಟ್ಟ. 'ಸ್ಪಾಟ್ಸ್‌ಗೆ ಹುಷಾರಿರಲಿಲ್ಲ, ಡಾಕ್ಟರ್ ಕೂಡ ತಮ್ಮ ಕೈಲಾದಷ್ಟು ಪ್ರಯತ್ನ ಪಟ್ಟರು, ಕೆಲವು ರೋಗಗಳನ್ನು ಗುಣಪಡಿಸುವುದು ಕಷ್ಟ' ಎಂದು ತಾರಿಕ್ ತಂದೆ ಹೇಳಿದರು.'ಈಗ ಗೋಲ್ಡೀ ಕೂಡ ಹುಷಾರಿಲ್ಲದೆ, ಸತ್ತು ನನ್ನನ್ನು ಬಿಟ್ಟು ಹೋಗುತ್ತಾನಾ' ಎಂದು ತಾರಿಕ್ ಕೇಳಿದ. ಹಾಗೇನೂ ಇಲ್ಲ ಗೋಲ್ಡೀ ಆರೋಗ್ಯವಾಗಿದ್ದಾಳೆ. ಹಾಗೂ ನಮ್ಮ ಜೊತೆಗೆ ಇರುತ್ತಾಳೆ' ಅಮ್ಮ ಹೇಳಿದರು.





'ನಾನು ಸ್ಪಾಟ್ಸ್ ಆರೈಕೆ ಚೆನ್ನಾಗಿ ಮಾಡಲಿಲ್ಲಾ? ನಾನು ಚೆನ್ನಾಗಿ ನೋಡಿಕೊಳ್ಳಲಿಲ್ಲ. ಇದು ನನ್ನ ತಪ್ಪಾ? ನನ್ನಿಂದ ಇಷ್ಟೆಲ್ಲಾ ಆಯ್ತಾ' ಎಂದು ಹೇಳಿ ಮತ್ತೇ ಅಳಲು ಶುರು ಮಾಡಿದ. 'ಹಾಗೇನಿಲ್ಲ' ಅಮ್ಮ ಅವನನ್ನು ತಬ್ಬಿಕೊಂಡು ತಮ್ತೇ ಮುಂದುವರಿಯುತ್ತಾ' ನೀನು ಅವಳನ್ನೂ ತುಂಬಾ ಚೆನ್ನಾಗಿ ನೋಡಿಕೊಂಡೆ, ಅದಕ್ಕೆ ಹೇಗೆ ಊಟ ಹಾಕುತ್ತಿದ್ದೆ. ಅದರ ಟ್ಯಾಂಕ್‌ನ್ನು ಹೇಗೆ ತೊಳೆಯುತ್ತಿದ್ದೆ. ನೀನು ಯಾವತ್ತು ನಿನ್ನ ಸ್ನೇಹಿತರನ್ನು ಮರೆತಿರಲಿಲ್ಲ. ನೀನು ಎಷ್ಟು ಪ್ರೀತಿ ಮಾಡುತ್ತೀಯಾ ಎಂದು ಸ್ಪಾಟ್ಸ್‌ಗೂ ಗೊತ್ತಿತ್ತು, ಅವನಿಗೆ ಆರೋಗ್ಯ ಹಾಳಾಗಿರೋದ್ರಲ್ಲಿ ಮತ್ತು ಸತ್ತಿದ್ದರಲ್ಲಿ ನಿನ್ನ ಯಾವುದೇ ತಪ್ಪಿಲ್ಲ' ಎಂದು ಅಮ್ಮ ಸಂತೈಸಿದರು. 'ಸ್ಪಾಟ್ಸ್‌ಗೆ ಇದೆಲ್ಲ ಗೊತ್ತಿತ್ತಾ' ಎಂದು ಮತ್ತೆ ಕೇಳಿದನು. 'ಹೌದು, ಅವನಿಗೆ ಗೊತ್ತಿತ್ತು. ನಿನ್ನ ಪ್ರೀತಿ ಅವನಿಗೆ ಅರ್ಥವಾಗಿತ್ತು. ಅಮ್ಮ ಸಮಾಧಾನದಿಂದ ಹೇಳಿದರು. ಕೆಲವು ಸಾರಿ ಇಂಥ ಘಟನೆಗಳು ನಡೆದಲ್ಲಿ ನಮ್ಮದೇನೂ ತಪ್ಪಿರುವುದಿಲ್ಲ. ಕೆಲವು ಬಾರಿ ಪ್ರಾಣಿಗಳ ಆರೋಗ್ಯ ಹಾಳಾದರೆ ಅದು ಯಾಕೆಂದು ಯಾರಿಗೂ ಗೊತ್ತಾಗುವುದಿಲ್ಲ ಅಮ್ಮ ಹೇಳಿದರು.





ಕೆಲವು ದಿನಗಳ ನಂತರ ಅಹ್ಮದ್ ಚಿಕ್ಕಪ್ಪ ವಿದೇಶದಿಂದ ಫೋನ್ ಮಾಡಿದರು. ಮೀನಿನ ಆರೋಗ್ಯ ವಿಚಾರಿಸಿದರು. ತಾರಿಕ್ ಅಳುತ್ತಾ ಎಲ್ಲಾ ವಿಷಯವನ್ನು ಹೇಳಿದನು."ಏನೂ ಚಿಂತೆ ಬೇಡ, ನಿನ್ನ ಹತ್ರ ಇನ್ನೂ ಗೋಲ್ಡೀ ಇದೆ. ನೀನು ನಿನನ್ ಸ್ನೇಹಿತರನ್ನು (ಮೀನುಗಳನ್ನು) ಎಷ್ಟು ಪ್ರೀತಿ ಮಾಡುತ್ತಿದ್ದೆ ಎಂದು ನನಗೆ ಗೊತ್ತು. ಮುಂದಿನ ತಿಂಗಳು ನಾನು ಬಂದಾಗ, ನಾವಿಬ್ಬರೂ ಹೋಗಿ ಗೋಲ್ಡೀಗೆ ಒಬ್ಬ ಸ್ನೇಹಿತನನ್ನು ತೆಗೆದುಕೊಂಡು ಬರೋಣ" ಎಂದರು ಚಿಕ್ಕಪ್ಪ. ಸಮಯ ಕಳೆದಂತೆ, ತಾರಿಕ್ ಕೆಲವು ಸಾರಿ ಸ್ಪಾಟ್ಸ್‌ನ್ನು ನೆನೆಸಿಕೊಂಡು ದುಃಖಿತನಾದರೂ, ಗೋಲ್ಡೀಯನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾನೆ ಹಾಗೂ ತನ್ನ ಚಿಕ್ಕಪ್ಪ ಬರುವುದನ್ನೇ ಕಾತರದಿಂದ ಕಾಯುತ್ತಿದ್ದಾನೆ.